

ಉತ್ತಮ ಬೋನ್ಸಾಯ್‌ಗೆ ಒಂದು ಉದಾಹರಣೆ

ಷಾಂಘೈನ ಜೇಡ್ ಬುದ್ಧ ದೇವಾಲಯದೊಳಗೆ ಪ್ರವೇಶಿಸಿದಂತೆಯೇ ಎದುರುಗೊಂಡಿದ್ದು, ಸ್ವಚ್ಛ ಸುಂದರ ಅಂಗಳದಲ್ಲಿ ಜೋಡಿಸಿಟ್ಟ ಬೋನ್ಸಾಯ್ ಕುಂಡಗಳು. ತಮ್ಮ ಸಹಜ ಗುಣಗಳನ್ನು ಸಂಪೂರ್ಣ ಮೈಗೂಡಿಸಿಕೊಂಡು ಕಂಗೊಳಿಸುತ್ತಿದ್ದ ಬೋನ್ಸಾಯ್ ಮರಗಿಡಗಳು ದೇವಾಲಯದ ಅಂಗಳಕ್ಕೇ ಅಲೌಕಿಕ ಸೊಬಗು ನೀಡಿವೆ. ಅವು ನಮ್ಮನ್ನು ಬಲು ಬೇಗನೆ ತಮ್ಮ ಪ್ರಭಾವದಲ್ಲಿ ಸಮ್ಮಿಳಿತಗೊಳಿಸಿಕೊಂಡವು.

ದೇವಾಲಯದ ಒಳಗೆ ಮಂದಸ್ಮಿತ ಪದ್ಮಾಸನ ವಿರಾಜಿತ ಬುದ್ಧನ ಶಾಂತ ವೈರಾಗ್ಯ ಪೂರ್ಣ ಮುಗುಳುನಗೆ ನಮ್ಮನ್ನು ಹಿಡಿದಿಟ್ಟರೆ, ಹೊರವಲಯದ ಹಸಿರು ಹೊದ್ದ ಪುಟ್ಟ ಪುಟ್ಟ ಮರಗಳು ನಮ್ಮನ್ನು ಕಟ್ಟಿ ಹಾಕಿದವು.

'ಬೋನ್ಸಾಯ್' ತಾಳ್ಮೆ, ಪ್ರೀತಿ ಬೇಡುತ್ತದೆ. 'ಬಾನ್' ಶಬ್ದದ ಅರ್ಥ 'ಅಂಚು ಎತ್ತರವಿಲ್ಲದ ಪಾತ್ರೆ' ಎಂದಾದರೆ 'ಸಾಯ್' ಗಿಡ ಎಂದು ಅರ್ಥ ನೀಡುವುದು. ಒಂದು ಪರಿಪೂರ್ಣ 'ಬೋನ್ಸಾಯ್' ಇಡೀ ಜೀವಮಾನದ ಪರಿಶ್ರಮದ ಫಲಶ್ರುತಿ. ತಲೆಮಾರುಗಳಿಗೆ ಸಾಗಿ ಹೋಗುವ ಸಂಪತ್ತು. ಎಲ್ಲೋ ಮರಗಿಡಗಳ ಬುಡದಲ್ಲಿ, ಬಂಡೆ ಕೊರಕಲಿನ ನಡುವೆ ಹುಟ್ಟಿದ ಪುಟ್ಟ ಸಸಿಗಳು ಒಂದು ಮನೆತನದ ಪೀಳಿಗೆಯಿಂದ ಪೀಳಿಗೆಗೆ ಹಸ್ತಾಂತರಿಸಲಾಗುವ ಅಪೂರ್ವ ಆಸ್ತಿಯಾಗಿ ಬೆಳೆಯಬಹುದು. ಚೀನಾ, ಜಪಾನ್ ದೇಶಗಳಲ್ಲಿ ಬೋನ್ಸಾಯ್‌ಗೆ ನೀಡುವ ಮಹತ್ವ ಭಾರತದಲ್ಲಿ ಆ ಮಟ್ಟದಲ್ಲಿ ಕಂಡು ಬರುವುದಿಲ್ಲ.

ಒಂದು ಪುಟ್ಟ ಬೋನ್ಸಾಯ್ ತನ್ನ ಉಪಸ್ಥಿತಿಯಿಂದಲೇ ತನ್ನ ಸುತ್ತಮುತ್ತಲ ಪರಿಸರವನ್ನೇ ಪರಿವರ್ತಿಸುವ ಶಕ್ತಿ ಹೊಂದಿರುವುದು. ಕೊಂಚ ಗಾಳಿ, ಬೆಳಕು, ತುಸು ಹನಿ ನೀರು ಬೇಕಷ್ಟೇ. ಆಗಾಗ್ಗೆ ಪ್ರಕೃತಿಯೊಂದಿಗೆ ಸೆಣಸುವಂತೆ ಊರ್ಧ್ವ ಮುಖಿಯಾಗಿ ಬೆಳೆದರೆ ಕತ್ತರಿ ಪ್ರಯೋಗಕ್ಕೆ ಒಳಪಡುವುದು ಅನಿವಾರ್ಯ. ನಿರಂತರ ತನ್ನ ಒಡೆಯ/ಒಡತಿಯ ಆರೈಕೆ ಸಂಗ ಬಯಸುವ ಬೋನ್ಸಾಯ್ ನಿಸ್ವಾರ್ಥ ಸಂಗಾತಿಯಾಗಿ ಜೀವನ ಪರ್ಯಂತ ಮೂಕಸಂಗಾತಿ.

ಕುಬ್ಜ ಸಸ್ಯ ಬೋನ್ಸಾಯ್‌ಗಳ ವಿಶೇಷ ಆಕಾರದಂತೆಯೇ ಅವುಗಳ ಜೀವನ ಕ್ರಮವೂ ವಿಶೇಷವಾದುದು. ಬೀಜ, ಸಸಿ ಗೂಟಿಯಿಂದ ಪಡೆದ ಹೊಸ ರೆಂಬೆ ಯಾವುದಾದರೂ ಸರಿಯೆ ಬೋನ್ಸಾಯ್ ಆರಂಭಿಸಲು. ಗಿರಿ ಕಂದರಗಳಿಗೆ ಟ್ರೆಕ್ಕಿಂಗ್ ಹೋಗುವ ಹವ್ಯಾಸಿಗಳಿಗೆ ಕಲ್ಲಿನ ಕೊರಕಲು ಮರಗಳ ಪೊಟರೆಗಳಲ್ಲಿ ನೈಸರ್ಗಿಕವಾಗಿಯೇ ಬೋನ್ಸಾಯ್ ಬೆಳೆಯಲು ಉಪಯುಕ್ತ ಸಸಿಗಳು ಸಿಗಬಹುದು. ಅವುಗಳ ಸಹಜ ಆಕಾರ ಶ್ರಮವನ್ನು ಉಳಿಸುವುದು. ಮುಂದೆಲ್ಲ ಸಲೀಸು. ಪುಟ್ಟ ಮಣ್ಣಿನ ಅಥವಾ ಪಿಂಗಾಣಿ ಪಾತ್ರೆಯಲ್ಲಿ ಪ್ರೀತಿಯಿಂದ ನೆಟ್ಟರೆ ಮುಂದೆ ನಿಮ್ಮ ಪಯಣ ಬೋನ್ಸಾಯ್ ಜೊತೆಗೆ ತನ್ನಿಂದ ತಾನೇ ಆರಂಭ !

ಬೋನ್ಸಾಯ್‌ನಲ್ಲಿ ನಿರ್ದಿಷ್ಟ ಆಕಾರವಿದ್ದು, ಅತಿ ಕುಬ್ಜ, ಮಧ್ಯಮ ಹಾಗೂ ದೊಡ್ಡ ಗಾತ್ರದ ವಿಧಾನವಿದ್ದು, ಮುಖ್ಯವಾಗಿ ಸ್ಥಳಾವಕಾಶದ ಬಗ್ಗೆ ನಿಗಾ ಇಡಬೇಕಾಗುವುದು. ಆಗಾಗ ಟಿಸಿಲೊಡೆದು ಹೊರ ಜಿಗಿಯುವ ಚಿಗುರು ಎಲೆ ಬಳ್ಳಿಗಳನ್ನು ಸತತ ತುಂಡರಿಸದಿದ್ದರೆ ಬೆಳೆದು ಹೆಮ್ಮರವಾಗುವ ಸಾಧ್ಯತೆ ತಳ್ಳಿಹಾಕಲಾಗದು. ಆಕಾರ ನೀಡಲು ಸಪೂರ ತಂತಿಗಳನ್ನು ರೆಂಬೆಗಳಿಗೆ ಸುತ್ತಿದಾಗ ಆಸರೆ ನೀಡಿದರೂ ಅದು ಸಸಿಗೇ ಮಾರಕವಾಗಬಾರದು. ಆಗಾಗ ವಿಶೇಷ ಆಹಾರವಾಗಿ ಗೊಬ್ಬರ ನೀಡಿದರೂ ಅತಿಯಾಗಬಾರದು.

ಫಾರ್ಮಲ್, ಇನ್‌ಫಾರ್ಮಲ್, ಸ್ಲಾಂಟಿಂಗ್, ಕ್ಯಾಸ್ಕೇಡ್, ಫ್ರೀ ಸ್ಟೈಲ್ ಹಾಗೂ ಗ್ರೂಪ್ ಬೋನ್ಸಾಯ್ ಎಂಬ ಪ್ರಕಾರಗಳಿವೆ. ಯಾವ ಹೆಸರಿನಿಂದ ಕರೆದರೂ, ಬೋನ್ಸಾಯ್ ಪರಿಪೂರ್ಣವೆನಿಸಿಕೊಳ್ಳಲು ಸತತ ಪರಿಶ್ರಮ ಅನಿವಾರ್ಯ. ಷಾಂಘೈನ ಬೌದ್ಧ ದೇವಾಲಯದ ಒಳಾಂಗಣದಲ್ಲಿ ಅಲೆದಾಡಿ ಬುದ್ಧನ ಅಲೌಕಿಕ ಆಧ್ಯಾತ್ಮಿಕ ಪರಿಧಿಯಿಂದ ಹೊರಬಂದಾಗ ಅಂಗಳದ ಅಪೂರ್ವ ಸೌಂದರ್ಯ ಮನಸನ್ನು ತಣಿಸಿತ್ತು.